**ಓ.ಎಸ್ ನಂ. 135/2016 ಡಿ.ಡಬ್ಲ್ಯೂ-1 (ಅಮೀರ್ ಜಾನ್)**

**ಸಾಕ್ಷಿಯನ್ನು ದಿನಾಂಕಃ 19.06.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಬಿ ಎಸ್ ಎಸ್ ವಕೀಲರಿಂದಃ**

10. ದಾವಾಸ್ತಿಗಳನ್ನು 1 ನೇ ವಾದಿ ರವರ ಗಂಡ 2 ರಿಂದ 4 ನೇ ವಾದಿಗಳ ತಂದೆ ನಾಗರಾಜು ರವರು ದಿಃ 10.08.2000 ರಂದು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ವಾದಿಗಳು ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಸದರಿ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತಾರೆ ಎಂದರೆ ಸಾಕ್ಷಿಯ ಅದು ಸುಳ್ಳು ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಕ್ರಯ ಪತ್ರ ಸುಳ್ಳಾಗಿದ್ದರೆ ವಾದಿಗಳು ಹಾಜರು ಪಡಿಸಿರುವ ಕ್ರಯಪತ್ರಕ್ಕೆ ಸಂಬಂಧಿಸಿದಂತೆ ವಾದಿಗಳ ಮೇಲೆ ಯಾವುದಾದರು ಕಾನೂನು ಕ್ರಮವನ್ನು ತೆಗೆದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಸದರಿ ಕ್ರಯಪತ್ರದಂತೆ 1 ನೇ ವಾದಿಯ ಗಂಡ ನಾಗರಾಜು ರವರು ಖಾತೆಯನ್ನು ಮಾಡಿಸುವ ಉದ್ದೇಶದಿಂದ ಕಂದಾಯ ಇಲಾಖೆಯಲ್ಲಿ ಅರ್ಜಿ ಸಲ್ಲಿಸಿದಾಗ ಕಂದಾಯ ಇಲಾಖೆಯವರು ಸದರಿ ಕ್ರಯಪತ್ರದಲ್ಲಿರುವ ಜಮೀನಿಗೆ ಸಂಬಂಧಿಸಿದಂತೆ ಕಲಂ 79 ಎ ಮತ್ತು 79 ಬಿ ರ ಭೂ ಕಂದಾಯ ಕಾಯ್ದೆ ಅಡಿಯಲ್ಲಿ ವಿಚಾರಣೆಗೆ ಮಾಡಿ ಖಾತೆ ಬದಲಾವಣೆಯ ಆದೇಶಕ್ಕೆ ಕೋರಿದೆ ಎಂದು ನಿಪಿ 13 ರಂತೆ ವರದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಆ ರೀತಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

11. 2005 ನೇ ಇಸವಿಯಲ್ಲಿ ಸದರಿ ಜಮೀನನ್ನು ಕ್ರಯಕ್ಕೆ ಪಡೆದ 1 ನೇ ವಾದಿ ರವರ ಗಂಡನಾದ ನಾಗರಾಜು ರವರಿಗೆ ಕಿಡ್ನಿಯ ತೊಂದರೆ ಆದ್ದುದ್ದರಿಂದ ಅವರು ಖರೀದಿಸಿದ ಜಮೀನನ್ನು ಗುತ್ತಿಗೆ ಆಧಾರದ ಮೇಲೆ ವ್ಯವಸಾಯ ಮಾಡುವ ಸಲುವಾಗಿ ಕ್ರಯದಾರರಾದ 2 ನೇ ಪ್ರತಿವಾದಿ ಅಬ್ದುಲ್ಲಾರವರಿಗೆ ನೀಡಿರುತ್ತಾರೆ ಎಂದರೆ ಸಾಕ್ಷಿಯು ಅದು ಸುಳ್ಳು ಎಂದು ನುಡಿಯುತ್ತಾರೆ. ಸದರಿ ನಾಗರಾಜು ರವರು

ಕಿಡ್ನಿಯ ಸಮಸ್ಯೆಯಿಂದ ದಿಃ 21.09.2009 ರಂದು ಮೃತ ಪಟ್ಟಿರುತ್ತಾರೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ನಾಗರಾಜು ರವರು ಮೃತಪಟ್ಟ ನಂತರ 2016 ನೇ ಇಸವಿಯಲ್ಲಿ ವಾದಿಗಳಿಗೆ ದಾವಾಸ್ತಿಯ ಬಗ್ಗೆ ತಿಳಿದುಬಂದಿದ್ದರಿಂದ 2 ನೇ ಪ್ರತಿವಾದಿಯ ಬಳಿ ದಾವಾಸ್ತಿಯ ಸ್ವಾದೀನವನ್ನು ಕೊಡಲು ಕೇಳಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅದು ಸುಳ್ಳು ಎಂದು ನುಡಿಯುತ್ತಾರೆ. ಅದೇ ಸಮಯದಲ್ಲಿ 2 ನೇ ಪ್ರತಿವಾದಿ ರವರು ದಾವಾಸ್ತಿಯನ್ನು

ಪ್ರತಿವಾದಿ 17, 19 ಮತ್ತು 20 ರವರಿಗೆ ಮಾರಾಟ ಮಾಡಿರುವ ಬಗ್ಗೆ ತಿಳಿಸಿರುತ್ತಾರೆ ಎಂದರೆ ಸಾಕ್ಷಿಯು ಅದು ಸುಳ್ಳು ಎಂದು ನುಡಿಯುತ್ತಾರೆ.

12. ಪ್ರತಿವಾದಿ 17 ಹೆಚ್ ಕೆ ರಾಘವೇಂದ್ರ ರಾವ್ ರವರು ಪ್ರತಿವಾದಿ 2 ಅಬ್ದುಲ್ಲಾ ಮತ್ತು ಪ್ರತಿವಾದಿ 18 ಸಾದಿಕ್ ರವರ ಜೊತೆ ಸೇರಿಕೊಂಡು ಶಾಮೀಲಾಗಿ ದಾವಾ ಐಟಂ ನಂ 1 (ಸ. ನಂ 64)ರ ಆಸ್ತಿಯನ್ನು ಖರೀದಿಸಿರುತ್ತಾರೆ ಎಂದರೆ ಸಾಕ್ಷಿಯು ನಿಜ ಎಂದು ನುಡಿಯುತ್ತಾರೆ. ಸದರಿ ಪ್ರತಿವಾದಿ 17 ಹೆಚ್ ಕೆ ರಾಘವೇಂದ್ರ ರಾವ್ ರವರು ದಿಃ01.03.2007 ರಂದು ಖರೀದಿಸಿದ ಐಟಂ ನಂ 1ರ ಆಸ್ತಿಯನ್ನು ದಿಃ 06.08.2015 ರಂದು ಪ್ರತಿವಾದಿ 19 ಹನುಮಪ್ಪ ದುಬಾಚಿ ಎಂಬುವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಹನುಮಪ್ಪ ದುಬಾಚಿ ಯಾರೆಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ, ಮುಂದುವರಿದು ಸದರಿ ರಾಘವೇಂದ್ರ ರವರು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಿಃ 30.01.2006 ರಂದು ಸದರಿ ಪ್ರತಿವಾದಿ 17 ರವರು ದಾವಾ ಐಟಂ ನಂ 1 ರ ಆಸ್ತಿಯನ್ನು ಪ್ರತಿವಾದಿ 5 ರಿಂದ 16 ರವರಿಂದ ಖರೀದಿಸಿದ್ದರು ಎಂದರೆ ಸಾಕ್ಷಿಯು ಪ್ರತಿವಾದಿ 17 ರವರು ಖೀರಿದಿಸಿರುವುದಿಲ್ಲ ಎಂದು ನುಡಿಯುತ್ತಾರೆ. ದಿಃ 30.01.2006 ರಂದು ಪ್ರತಿವಾದಿ 17 ರಾಘವೇಂದ್ರ ರಾವ್ ರವರು ಖರೀದಿಸಿದ ದಾವಾ ಸ್ವತ್ತಿನಲ್ಲಿ ಪ್ರತಿವಾದಿ 20 ಮಹದೇವಪ್ಪ ರವರಿಗೆ ಐಟಂ ನಂ 1 ರ ಆಸ್ತಿಯನ್ನು ದಿಃ 23.11.2015 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ದಾವಾಸ್ತಿಯನ್ನು 1 ರಿಂದ 4 ನೇ ಪ್ರತಿವಾದಿ 1 ನೇ ವಾದಿ ರವರ ಗಂಡ ನಾಗರಾಜು ರವರಿಗೆ ಮೊದಲೇ ಮಾರಾಟ

ಮಾಡಿದುದ್ದರಿಂದ ಪ್ರತಿವಾದಿ 5 ರಿಂದ 16 ರವರುಗಳಿಗೆ ದಾವಾಸ್ತಿಯಲ್ಲಿ ಐಟಂ ನಂ 1 ನೇ ಆಸ್ತಿಯನ್ನು ಪ್ರತಿವಾದಿ 17 ರವರಿಗೆ ಮಾರಾಟ ಮಾಡುವ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸಾಕ್ಷಿಯು ಅದು ಸುಳ್ಳು ಎಂದು ನುಡಿಯುತ್ತಾರೆ. ಪ್ರತಿವಾದಿ 2 ಅಬ್ದುಲ್ಲಾ ಮತ್ತು ಪ್ರತಿವಾದಿ 18 ಸಾಧಿಕ್ ರವರ ದಾವಾ ಐಟಂ ನಂ 2 ರ ಆಸ್ತಿಯನ್ನು ಪ್ರತಿವಾದಿ 17 ಹೆಚ್ ಕೆ ರಾಘವೇಂದ್ರ ರಾವ್ ರವರಿಗೆ ಮಾರಾಟ ಮಾಡಿದ್ದು ಸದರಿ ಪ್ರತಿವಾದಿ 2 ಮತ್ತು 18 ರವರಿಗೆ ಆ ರೀತಿ ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿ 2 ಮತ್ತು 18 ರವರು ಮಾರಾಟ ಮಾಡಿರುತ್ತಾರೆ ಆದರೆ ಅವರಿಗೆ ಮಾರಾಟ ಮಾಡುವ ಹಕ್ಕು ಇತ್ತೋ, ಇಲ್ಲವೋ ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಮ್ಮ ಲಿಖಿತ ಹೇಳಿಕೆಯ ಖಂಡಿಕೆ 8 ರಲ್ಲಿ ಹೇಳಿರುವಂತೆ 2 ಮತ್ತು 18 ನೇ ಪ್ರತಿವಾದಿ ರವರಿಗೆ ದಾವಾ ಐಟಂ ನಂ 2 ರ ಸ್ವತ್ತನ್ನು ಪ್ರತಿವಾದಿ 17 ರವರಿಗೆ ಮಾರಾಟ ಮಾಡಿದ್ದು ಅವರಿಗೆ ಆ ರೀತಿ ಮಾರಾಟ ಮಾಡುವ ಹಕ್ಕು ಇರಲಿಲ್ಲ ಎಂದು ವಾದಿಗಳು ತಮ್ಮ ವಾದ ಪತ್ರದಲ್ಲಿ ಹೇಳಿರುವ ವಿಷಯ ಸುಳ್ಳು ಎಂದು ನಾನು ಹೇಳಿ ಬರೆಸಿರುತ್ತೇನೆ ಎಂದರೆ ಸಾಕ್ಷಿಯು ಅದು ಸುಳ್ಳು ಎಂದು ನುಡಿಯುತ್ತಾರೆ.

13. ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನ್ನ ಲಿಖಿತ ಹೇಳಿಕೆಯನ್ನು ನಮ್ಮ ವಕೀಲರಿಗೆ ನಾನೇ ಹೇಳಿ ಬರೆಸಿರುತ್ತೇನೆ. ನನಗೆ ಕಾನೂನಿನ ಬಗ್ಗೆ ಯಾವುದೇ ತಿಳುವಳಿಕೆ ಇರುವುದಿಲ್ಲ ಎಂದರೆ ಸರಿ. ಹಾಗಾಗಿ ನನ್ನ ಲಿಖಿತ ಹೇಳಿಕೆಯಲ್ಲಿ ಕಾನೂನಿನ ಬಗ್ಗೆ ಬರೆದಿರುವ ವಿಷಯಗಳನ್ನು ನಾನು ಹೇಳಿ ಬರೆಸಿರುವುದಿಲ್ಲ ಎಂದರೆ ಸರಿ.

14. ನಾನು ಈ ದಾವೆಯ 12 ನೇ ಪ್ರತಿವಾದಿಯಾಗಿರುವುದಿಲ್ಲ ಆದರೂ ಸಹ ನಾನು ಪ್ರತಿವಾದಿ 19 ಮತ್ತು 20 ರವರ ಮಾತು ಕೇಳಿ 12 ಪ್ರತಿವಾದಿ ಎಂದು ಹೇಳಿ ಸಾಕ್ಷ ನುಡಿಯುತ್ತಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯ ಬಗ್ಗೆ ನನಗೆ ಯಾವುದೇ ವಿಷಯ ತಿಳಿಯದೇ ಇದ್ದರೂ ಸಹ ಪ್ರತಿವಾದಿ 19 ಮತ್ತು 20 ರವರ ಮಾತು ಕೇಳಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ